ಶ್ರೀ ಬಿ.ಸುರೇಶ ಗೌಡ : ಮಾನ್ಯ ಅಧ್ಯಕ್ಷರೆ, ಹಣವನ್ನು RDPR ನಿಂದಲೇ ಕೊಡಿಸಿದರೆ ಅನುಕೂಲವಾಗುತ್ತದೆ. ಅವರು ಸಮನ್ವಯ ಸಾಧಿಸುತ್ತೇವೆಂದು ಹೇಳಿದ್ದಾರೆ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಈ ಉತ್ತರವನ್ನು RDPR ಮಂತ್ರಿಗಳೇ ಕೊಟ್ಟಿದ್ದಾರೆ. ಅದು ಗ್ರಾಮೀಣಾಭಿವೃದ್ಧಿ ಇಲಾಖೆಯ ವ್ಯಾಪ್ತಿಗೆ ಬರುತ್ತದೆ. ಕುಡಿಯುವ ನೀರಿನ ಸಮಸ್ಯೆಯಾಗಿರುವುದರಿಂದ ತಂತಿ ಬೇಲಿ ಹಾಕಬೇಕೆಂದು ಹೇಳಿದ್ದಾರೆ. ಜಿಲ್ಲಾ ಪಂಚಾಯಿತಿಗೆ ಸೂಚನೆ ಕೊಡಲಾಗಿದೆ.

ಶ್ರೀ ಬಿ.ಸುರೇಶ ಗೌಡ : ಮಾನ್ಯ ಅಧ್ಯಕ್ಷರೆ, ಕುಡಿಯುವ ನೀರಿಗೆ ಸಂಬಂಧಿಸಿರುವುದರಿಂದ ಜಲ ಸಂಪನ್ಮೂಲ ಇಲಾಖೆಯೊಂದಿಗೆ ಸಮನ್ವಯ ಸಾಧಿಸಿ ಆ ಇಲಾಖೆಯಿಂದಲೇ ಹಣ ಕೊಡಿಸಬಹುದಲ್ಲಾ?

ಅಧ್ಯಕ್ಷರು : ಹಾಗಾದರೆ, ಜಲಸಂಪನ್ಮೂಲ ಇಲಾಖೆಯವರನ್ನು ಕೇಳಿ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಜಲಸಂಪನ್ಮೂಲ ಇಲಾಖೆಯ ಸಮನ್ವಯದಲ್ಲಿ ಜಾಗ್ರತೆಯಾಗಿ ಅಗತ್ಯ ಕ್ರಮ ವಹಿಸಲು ತುಮಕೂರು ಜಿಲ್ಲಾ ಪಂಚಾಯಿತಿಗೆ ಸೂಚಿಸಿದೆ.

ಅಧ್ಯಕ್ಷರು : ಶೂನ್ಯ ವೇಳೆಯಲ್ಲಿ ಈ ರೀತಿ ಮಾತನಾಡಿದರೆ ಆಗುವುದಿಲ್ಲ. ಕೆರೆಗೆ ಯಾರು ಸಂಬಂಧಪಟ್ಟಿರುತ್ತಾರೆ ಅವರಿಗೆ ಪ್ರತ್ಯೇಕವಾಗಿ ಕೇಳಿ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಸಚಿವರು ಹೇಳಿರತಕ್ಕಂಥ ಹಿನ್ನೆಲೆಯಲ್ಲಿ ಆ ಉತ್ತರಕ್ಕೆ ಬದ್ಧರಾಗಿ ಆ ಪ್ರಕಾರವಾಗಿ ಕಾರ್ಯಕ್ರಮಗಳನ್ನು ನಾವು ರೂಪಿಸುತ್ತೇವೆ.

iv) ವಿಷಯ : ಅಲ್ಪಸಂಖ್ಯಾತ ವಿದ್ಯಾರ್ಥಿನಿಲಯ ಪ್ರಾರಂಭವಾಗದೆ ಇರುವ ಬಗ್ಗೆ.

ಶ್ರೀ ಬಿ.ಆರ್.ಪಾಟೀಲ್(ಆಳಂದ) : ಮಾನ್ಯ ಅಧ್ಯಕ್ಷರೆ, ಕಳೆದ ಒಂದೂವರೆ ವರ್ಷದಿಂದ ಅಲ್ಪಸಂಖ್ಯಾತರ hostel ಅನ್ನು ಹಡಲಗಿ ಎನ್ನುವ ಗ್ರಾಮದಲ್ಲಿ ನಿರ್ಮಾಣ ಮಾಡಿದ್ದಾರೆ. ಆ hostel ಬಂದು ಒಂದು ವರ್ಷ 4

ತಿಂಗಳಾಗಿದೆ. ಪ್ರತಿ ಸಲ ಕೇಳಿದಾಗಲೂ ಇನ್ನು ನಮಗೆ Contractor hand over ಮಾಡಿಲ್ಲವೆಂದು ಅವರು ಹೇಳುತ್ತಾರೆ. ಇತ್ತೀಚೆಗೆ ಮಾನ್ಯ ಮಂತ್ರಿಗಳು ಅಲ್ಲಿ ಒಂದು hostel ಅನ್ನು ಪ್ರಾರಂಭ ಮಾಡಿದರು. ಅಲ್ಲಿ hostel ಅನ್ನು ಪ್ರಾರಂಭ ಮಾಡಿದರೂ ಶಾಸಕನಾಗಿ ಅವರು ನನ್ನನ್ನು ಕರೆಯಲಿಲ್ಲ. ಈ ಅಲ್ಪಸಂಖ್ಯಾತರ ವಿಭಾಗದಲ್ಲಿ ನಾವು ಹೇಳುವಂಥ ಮಾತಿಗೆ ಬೆಲೆಯಿಲ್ಲ ಹಾಗೂ hostel ಅನ್ನು ಕೊಟ್ಟು ಮಕ್ಕಳಿಗೆ ವಿದ್ಯೆ ಕೊಡುತ್ತಿಲ್ಲ, ಮಕ್ಕಳಿಗೆ ಅನುಕೂಲ ಮಾಡಿಕೊಡುತ್ತಿಲ್ಲ.

ಅಧ್ಯಕ್ಷರು : ಮಾನ್ಯ ಸಚಿವರೆ, ಅಲ್ಪಸಂಖ್ಯಾತ ವಿದ್ಯಾರ್ಥಿನಿಲಯ ಪ್ರಾರಂಭವಾಗದೆ ಇರುವ ಬಗ್ಗೆ ಹೇಳಿ.

ಶ್ರೀ ಖಮರುಲ್ ಇಸ್ಲಾಂ (ವಕ್ಫ್, ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು) : ಈ ಪ್ರಶ್ನೆ ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಿಸಿರುತ್ತದೆ.

ಶ್ರೀ ಬಿ.ಆರ್.ಪಾಟೀಲ್ : ಇದು ಸಮಾಜ ಕಲ್ಯಾಣ ಇಲಾಖೆಗೆ ಬರುವುದಿಲ್ಲ. ನಿಮಗೇ ಬರುತ್ತದೆ.

ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ, ಪಶು ಸಂಗೋಪನೆ, ಮಾನವ ಹಕ್ಕುಗಳು) (ಸಮಾಜ ಕಲ್ಯಾಣ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆ ಸಮಾಜ ಕಲ್ಯಾಣ ಸಚಿವರಿಗೆ ಬರುತ್ತದೆ. ಸಚಿವರು ಇಲ್ಲ. ಉತ್ತರವೂ ಇಲ್ಲ. ಅವರಿಂದ ಉತ್ತರ ತರಿಸಿಕೊಡುತ್ತೇವೆ.

ಶ್ರೀ ಬಿ.ಆರ್.ಪಾಟೀಲ್ : ಮಾನ್ಯ ಅಧ್ಯಕ್ಷರೆ, ಸಂಬಂಧಪಟ್ಟಂಥ ಸಚಿವರು ಇದ್ದಾರೆಯೇ?

ಅಧ್ಯಕ್ಷರು : ಇಲ್ಲ.

ಶ್ರೀ ಬಿ.ಆರ್.ಪಾಟೀಲ್ : ಮಾನ್ಯ ಅಧ್ಯಕ್ಷರೆ, ನನ್ನ ಕೆಲಸ ಆಗಬೇಕು.

ಅಧ್ಯಕ್ಷರು : ಮಾನ್ಯ ಜಯಚಂದ್ರರವರು ಸಚಿವರಿಂದ ಉತ್ತರ ತರಿಸಿಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಬಿ.ಆರ್.ಪಾಟೀಲ್ : ಮಾನ್ಯ ಅಧ್ಯಕ್ಷರೆ, hostel ಅನ್ನು hand over ಮಾಡಿಕೊಂಡು ಮಕ್ಕಳು ಅಲ್ಲಿ ಇರುವುದಕ್ಕೆ ಮತ್ತು ಓದುವುದಕ್ಕೆ ಅನುಕೂಲ ಮಾಡಿಕೊಡಿ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನಾಳೆ ಈ ವಿಷಯವಾಗಿ ಮತ್ತೊಮ್ಮೆ ಸಚಿವರೊಂದಿಗೆ ಚರ್ಚೆ ಮಾಡೋಣ.

ಅಧ್ಯಕ್ಷರು : ಮಾನ್ಯ ಪಾಟೀಲ್ ರವರೆ, ಉತ್ತರವನ್ನು ತರಿಸಿಕೊಡುತ್ತಾರೆ. ಮಾನ್ಯ ರುದ್ರಪ್ಪ ಮಾನಪ್ಪ ಲಮಾಣಿ, ಇಲ್ಲ. ಮಾನ್ಯ ರಾಜಣ್ಣ, ಇಲ್ಲ.

V) ವಿಷಯ : ಪುಷ್ಪಲತಾ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಯನ್ನು ಬಂಧಿಸದೆ ಇರುವ ಬಗ್ಗೆ

ಶ್ರೀಮತಿ ಶಕುಂತಳಾ ಟಿ.ಶೆಟ್ಟಿ(ಪುತ್ತೂರು) : ಮಾನ್ಯ ಅಧ್ಯಕ್ಷರೆ, ಪುತ್ತೂರು ಕ್ಷೇತ್ರದ ಹೃದಯ ಭಾಗ ಉಪ್ಪಿನಂಗಡಿಯ ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿಯ ಬದಿಯಲ್ಲಿ ವಾಸಿಸುತ್ತಿದ್ದ ಪುಷ್ಪಲತಾ ಎಂಬುವವರು ದಿನಾಂಕ 05.06.2014 ರಂದು ಹಾಡುಹಗಲೇ ಕೊಲೆಯಾಗಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಇನ್ನು ಯಾರನ್ನು ಬಂಧಿಸದಿರುವುದು ಕ್ಷೇತ್ರದ ಮಹಿಳೆಯರಲ್ಲಿ ಆತಂಕ ಹುಟ್ಟಿಸಿದೆ.

ವಿಷಯ : ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕು ಉಪ್ಪಿನಂಗಡಿಯ ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿಯ ಬದಿಯಲ್ಲಿ ವಾಸಿಸುತ್ತಿದ್ದ ಪುಷ್ಪಲತಾ ಎಂಬುವವರು ದಿನಾಂಕ 05–06–2014 ರಂದು ಹಾಡುಹಗಲೇ ಕೊಲೆಯಾಗಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಇನ್ನು ಯಾರನ್ನು ಬಂಧಿಸದಿರುವುದು ಕ್ಷೇತ್ರದ ಮಹಿಳೆಯರಲ್ಲಿ ಆತಂಕ ಹುಟ್ಟಿಸಿದೆ. ತನ್ನ ಕ್ಷೇತ್ರದ ಕಾನೂನು ಮತ್ತು ಸುವ್ಯವಸ್ಥೆಯ ಪಾಲನೆಗಾಗಿ ಹಾಗೂ ಕ್ಷೇತ್ರದ ಮಹಿಳೆಯರ ಮಾನ–ಪ್ರಾಣದ ಹಿತದೃಷ್ಟಿಯಿಂದಾಗಿ ಈ ಕೊಲೆಗೆ ಸಂಬಂಧಪಟ್ಟಂತೆ ದಿನಾಂಕ 09–07–2014ರಂದು ಶೂನ್ಯ ವೇಳೆಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡುವಂತೆ ಕೋರಿರುತ್ತಾರೆ.